# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ 2014-15ನೇ ಸಾಲಿನ 2ನೇ ತ್ರೈಮಾಸಿಕ ಯೋಜನಾ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ: ಕೃಇ 28 ಕೃವಿಬೆ 2014 ದಿನಾಂಕ: 14-05-2014.

2) ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಹನಿಅ/ ವಿಭಾಗ-3/2014-15ರ ದಿನಾಂಕ 09-07-2014

**** *** ****

**ಪ್ರಸ್ತಾವನೆ:-**

2014-15ನೇ ಸಾಲಿನ ಆಯವ್ಯಯದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಕೃಷಿ ಶಿಕ್ಷಣ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ 2415-80-277-1-01-101 (ಯೋಜನೆ) ರಡಿಯಲ್ಲಿ ರೂ.2156.38 ಲಕ್ಷಗಳ ಅನುದಾನವನ್ನು ಹಾಗೂ ಕೃಷಿ ಸಂಶೋಧನೆ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ 2415-80-004-1-01-101ರಡಿಯಲ್ಲಿ ರೂ.2800.00 ಲಕ್ಷಗಳ ಸಹಾಯಾನುಧಾನವನ್ನು ಹಂಚಿಕೆ ಮಾಡಲಾಗಿದೆ.

2. ಮೇಲೆ (1)ರಲ್ಲಿ ಓದಲಾದ ದಿನಾಂಕ 14-05-2014ರ ಆದೇಶದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ (ಯೋಜನೆ) ಕೃಷಿ ಶಿಕ್ಷಣ ಉದ್ದೇಶಕ್ಕಾಗಿ ಲೆಕ್ಕಶೀರ್ಷಿಕೆ 2415-80-277-1-01-101 (ಯೋಜನೆ) ರಡಿಯಲ್ಲಿ ಒದಗಿಸಲಾದ ರೂ.2156.38 ಲಕ್ಷಗಳ ಪೈಕಿ 539.095 ಲಕ್ಷಗಳನ್ನು ಹಾಗೂ ಕೃಷಿ ಸಂಶೋಧನೆ ಉದ್ದೇಶಕ್ಕಾಗಿ ಲೆಕ್ಕಶೀರ್ಷಿಕೆ 2415-80-004-1-01 (ಸಹಾಯಾನುದಾನ 101) ರಡಿಯಲ್ಲಿ ಒದಗಿಸಲಾದ ರೂ.2800.00 ಲಕ್ಷಗಳ ಅನುದಾನದ ಪೈಕಿ ರೂ.700.00 ಲಕ್ಷ ಒಟ್ಟಾರೆ ರೂ.1239.095 ಲಕ್ಷಗಳನ್ನು ಮೊದಲನೇ ಮಾಸಿಕ ಕಂತಿನ ಅನುದಾನವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.

3. 2014-15ನೇ ಸಾಲಿನ ಅನುದಾನದ ಪೈಕಿ 1ನೇ ತ್ರೈಮಾಸಿಕ ಅನುದಾನವನ್ನು ನಿಗದಿಪಡಿಸಲಾದ ಉದ್ದೇಶಗಳಿಗೆ ಬಳಕೆ ಮಾಡಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ: 09-07-2014ರ ಪತ್ರದೊಂದಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳು ಕಳುಹಿಸುತ್ತಾ ಯೋಜನೆ ಅನುದಾನದ 2ನೇ ತ್ರೈಮಾಸಿಕ ಕಂತು ರೂ.539.095 ಲಕ್ಷಗಳನ್ನು ಕೃಷಿ ಶಿಕ್ಷಣ ಲೆಕ್ಕ ಶೀರ್ಷಿಕೆ 2415-80-277-1-01-101ರಡಿ ಹಾಗೂ ರೂ.700.00 ಲಕ್ಷಗಳನ್ನು ಕೃಷಿ ಸಂಶೋಧನೆ ಲೆಕ್ಕ ಶೀರ್ಷಿಕೆ 2415-80-004-1-01-101ಅಡಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

4. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಕೃಇ 28 ಕೃವಿಬೆ 2014, ಬೆಂಗಳೂರು, ದಿನಾಂಕ: 22-08-2014

5. ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಯೋಜನೆ ಅಡಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ 2014-15ನೇ ಸಾಲಿಗೆ ಕೃಷಿ ಶಿಕ್ಷಣ ಲೆಕ್ಕಶೀರ್ಷಿಕೆ 2415-80-277-1-01-101 ಅಡಿಯಲ್ಲಿ ಹಂಚಿಕೆ ಮಾಡಲಾದ ರೂ. 2156.38 ಲಕ್ಷಗಳ ಪೈಕಿ 539.095 ಲಕ್ಷಗಳನ್ನು (ರೂ. ಐದು ನೂರ ಮೂವತ್ತೊಂಭತ್ತು ಲಕ್ಷದ ಒಂಭತ್ತು ಸಾವಿರದ ಐದುನೂರು ಮಾತ್ರ) ಹಾಗೂ ಕೃಷಿ ಸಂಶೋಧನೆ ಲೆಕ್ಕಶೀರ್ಷಿಕೆ 2415-80-004-1-01-101 ಅಡಿಯಲ್ಲಿ ಹಂಚಿಕೆ ಮಾಡಲಾದ ರೂ. 2800.00 ಲಕ್ಷಗಳ ಪೈಕಿ ರೂ.700.00 (ರೂ. ಏಳು ನೂರು ಲಕ್ಷ ಮಾತ್ರ) ಲಕ್ಷಗಳಂತೆ ಒಟ್ಟು ರೂ. 1239.095 ಲಕ್ಷ (ಒಂದು ಸಾವಿರದ ಎರಡು ನೂರ ಮುವತ್ತೊಂಬತ್ತು ಲಕ್ಷ ಮತ್ತು ಒಂಭತ್ತು ಸಾವಿರದ ಐದು ನೂರು ರೂಪಾಯಿಗಳು ಮಾತ್ರ)ಗಳನ್ನು ಎರಡನೇ ತ್ರೈಮಾಸಿಕ ಕಂತಿನ

ಅನುದಾನವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಯೋಜನೆ ಉದ್ದೇಶಗಳಿಗಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ:-

1. ಪ್ರತಿ ತಿಂಗಳ ಅನುದಾನವನ್ನು ಆಯಾ ತಿಂಗಳ 20ನೇ ತಾರೀಖಿನಂದು ಅಥವಾ 20ನೇ ತಾರೀಖಿನ ನಂತರ ಹಿಂದಿನ ತಿಂಗಳ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;
2. ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;
3. ಬಿಡುಗಡೆಯಾದ ಯೋಜನಾ ಅನುದಾನದ ಸಂಶೋಧನೆಯ ಪೈಕಿ ಶೇ. 50ರಷ್ಟು ಹಣವನ್ನು ಸಂಶೋಧನೆ ಮತ್ತು ಅಭಿವೃದ್ಧಿಯ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದು.
4. ಸರ್ಕಾರವು ನೀಡಿದ ಸೂಚನೆ, ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ಯೋಜನೆಯ ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;
5. ~~ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ~~ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;
6. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;
7. ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು.

6. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಇವರು ಸಲ್ಲಿಸುವ ಬಿಲ್ಲಿಗೆ ಸರ್ಕಾರದ ಅಧೀನ ಕಾರ್ಯದರ್ಶಿ (ಕೃಷಿ ಸೇವೆಗಳು), ಕೃಷಿ ಇಲಾಖೆ ಇವರು ಮೇಲು ರುಜು ಮಾಡತಕ್ಕದ್ದು.

7. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 3 ಟಿಎಫ್‌ಪಿ 2014, ದಿನಾಂಕ: 04-04-2014ರಲ್ಲಿ ಆಡಳಿತಾತ್ಮಕ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಹೊರಡಿಸಿದೆ
ದಿನಾಂಕ: 27/8/14

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ
(ಸೇವೆಗಳು ಮತ್ತು ಸಮನ್ವಯ)
(ದೂರವಾಣಿ ಸಂಖ್ಯೆ: 080 2203 2344)

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ/ತನಿಖೆ) ಕರ್ನಾಟಕ, ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
3. ಕೃಷಿ ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
6. ಉಪ ನಿರ್ದೇಶಕರು, ನೆಟ್‌ವರ್ಕ್ ಮೇನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳು, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಇಲಾಖಾ ಅಂತರ್ಜಾಲ ತಾಣ.